ಜಾತ್ರೆಯ ಮರುದಿನದಿಂದ ಮೀನು ಊಟ ಕೇಳಿದ. ನನ್ಗೆ ಆಶ್ಚರ್ಯವಾಯಿತು. ಕೆಲವರು ಜಾತ್ರೆಗಿಂತ ಒಂದು ತಿಂಗಳು ಮೊದಲು ಮಾಂಸ ತಿನ್ನೋಲ್ಲ. ಹಾಗೇ ವ್ರತವೇನೋ ಅಂತ ಭಾವಿಸಿದೆ. ಇತ್ತೀಚಿಗೆ ಸ್ವೀಟು ತಿನ್ನುವ ಹುಚ್ಚು ಶುರುವಾಗಿದೆ. ರಸಗುಲ್ಲ, ರಸಮಲಾಯ್ ಅಂತಹದೆಲ್ಲಾ ತರಿಸ್ತಾನೆ.'

'ನಿನ್ನದು ಕೇವಲ ಕಲ್ಪನೆ. ಅವನೇನೂ ಮಾಡಿಲ್ಲವಾದರೂ, ನೀನು ಹೆದರುವುದೇಕೆ?' ನಾನು ಕೇಳಿದೆ.

'ನೀವೊಮ್ಮೆ ಬಂದು ನೋಡಿ, ಸಾರ್. ನಿಮ್ಗೇ ಗೊತ್ತಾಗುತ್ತೆ.'

'ಆ ಮನೆಗೆ ಯಾರಾದರೂ ಬರುತ್ತಾರೆಯೇ?'

'ನಾನು ನೋಡಿಲ್ಲ. ನಾನು ಹನ್ನೆರಡೂವರೆಗೆ ಹೊರಟು ಹೋಗ್ತೀನಿ. ಆ ಮನೆ ಇರುವುದು ತುಸು ನಿರ್ಜನ ಜಾಗದಲ್ಲಿ. ಹತ್ತಿರ ಯಾವ ಮನೆಗಳೂ ಇಲ್ಲ, ಕೇಳೋಣವೆಂದರೆ,' ಕರಮಚಂದ ಏನೋ ಯೋಚಿಸಿದವನು ನಾಟಕೀಯವಾಗಿ ಹೇಳಿದ.

'ನಾವು ನಾಳೆ ಮಧ್ಯಾಹ್ನ ಬರ್ತೇವೆ. ಒಂದು ಕುತೂಹಲಕಾರಿ ಪ್ರಕರಣ ಕೊಟ್ಟಿದ್ದಕ್ಕೆ ಧನ್ಯವಾದಗಳು, ವಲ್ಲಮ್ಮ'. ಮನೆಯ ವಿಳಾಸ ನೀಡಿ, ವಲ್ಲಮ್ಮ ತೆರಳಿದಳು.

***

ಸಂಜೆಯಿಡೀ ಗಣಕ ಯಂತ್ರದಲ್ಲಿ ತಲೆ ಹುದುಗಿಸಿದ್ದ ಕರಮಚಂದ ನಂತರ ಯಾರೊಂದಿಗೋ ಚರವಾಣಿಯಲ್ಲಿ ಬಂಗಾಳಿ ಭಾಷೆಯಲ್ಲಿ ಮಾತನಾಡುತ್ತಿದ್ದ. ಸುಮಾರು ಹದಿನೆಂಟು ಭಾಷೆಗಳಲ್ಲಿ ಸಂಭಾಷಣೆ ನಡೆಸುವ ಸಾಮರ್ಥ್ಯ ಆತನಿಗಿತ್ತು. ರಾತ್ರಿ ಊಟದ ವೇಳೆ ನಾನೇ ಪ್ರಶ್ನಿಸಿದೆ, 'ಈ ತೆಳ್ಳಗಿನ ಮನುಷ್ಯನ ಉದ್ದೇಶವೇನು?'

'ಒಂದಂತೂ ಸ್ಪಷ್ಟ. ವಲ್ಲಮ್ಮ ಸುಮ್ಮನೆ ಮೂಗು ತೂರಿಸಿದರೆ, ಅಲುಮೇಲುವಿನ ಗತಿಯೇ ಆಕೆಗೂ ಆದೀತು. ಬಿದ್ದಪ್ಪ, ನೀನು ನಾಳೆ ಮಧ್ಯಾಹ್ನದ ನಿದ್ದೆ ಬಿಡಲು ತಯಾರಾಗಿರು.'

ಮರುದಿನ ಅಪರಾಹ್ನ ರಿವಾಲ್ವರ್ ಹಾಗೂ ಒಂದು ಪ್ಲಾಸ್ಟಿಕ್ ಪುಟ್ಟ ಡಬ್ಬಿಯನ್ನು ಜೇಬಿನಲ್ಲಿರಿಸಿ, ಕರಮಚಂದ ಸಿದ್ಧನಾದ. ಮೂರರ ಹೊತ್ತಿಗೆ ನಾವು ತೆಳ್ಳಗಿನ ಮನುಷ್ಯನ ಮನೆಯ ಸನಿಹ ಇದ್ದೆವು. ಗೇಟಿಗೆ ಸ್ವಯಂಚಾಲಿತ ಬೀಗ ಇದ್ದಿದ್ದರಿಂದ ತೆಗೆಯಲಾಗಲಿಲ್ಲ. ಜೈಲಿನ ಆವರಣದಂತೆ ಇದ್ದ ಎತ್ತರವಾದ ಕಾಂಪೌಂಡು. ಹಿಂಭಾಗದಲ್ಲಿ ಒಂದು ಕಡೆ ಸನಿಹದಲ್ಲೇ ಇದ್ದ ಮರವನ್ನೇರಿ, ಬಲು ತ್ರಾಸದಿಂದ ಕಾಂಪೌಂಡು ಹಾರಿ, ಒಳ ನುಗ್ಗಿದೆವು. ದೊಪ್ಪನೆ ಬಿದ್ದ ಸದ್ದಿಗೆ ನಾವೇ ಬೆಚ್ಚಿದೆವು. ಆದರೆ ಯಾವುದೇ ಚಲನವಲನ ಕಂಡುಬರಲಿಲ್ಲ. ಸುರಕ್ಷತೆಗಾಗಿ ಮರಗಳ ಸಮುದಾಯ ಇದ್ದ ಕಡೆಯನ್ನೇ ಆರಿಸಿಕೊಂಡಿದ್ದೆವು. ಮೆಲ್ಲಗೆ ಹೆಜ್ಜೆ ಹಾಕಿದೆವು. ಒಂದೆಡೆ, ಹಳ್ಳದಲ್ಲಿ ಬಳಸಿ, ಎಸೆದ ಕಿಚನ್ನಿನ ಶೇಷ ಪದಾರ್ಥಗಳು ಕಾಣಿಸಿತು.

ತುಸು ಹೊತ್ತಿನಲ್ಲಿ ಬೂದು ಬಣ್ಣದ ಕಟ್ಟಡ ಗೋಚರಿಸಿತು. ನಾವು ಅದರ ಎಡಪಾರ್ಶ್ವದಲ್ಲಿದ್ದೆವು. ಕಾಣಿಸುವ ಮೂರು ಕಿಟಕಿಗಳ ಗಾಜಿನ ಬಾಗಿಲುಗಳು ಮುಚ್ಚಿದ್ದು, ಒಳಗೆ ಪರದೆಗಳನ್ನು ಇಳಿಬಿಡಲಾಗಿತ್ತು. ನಾವು ಬೆಕ್ಕಿನ ಹೆಜ್ಜೆ ಹಾಕಿ, ಒಂದು ಕಿಟಕಿಯ ಸನಿಹ ಬಂದೆವು. ನಾನು ಒಳಗೆ ಇಣುಕಿದೆ. ಪರದೆಯ ಸಂದಿನಲ್ಲಿ ಅಸ್ಪಷ್ಟವಾಗಿ ಕಾಣಿಸಿತು. ಅದೊಂದು ಮಲಗುವ ಕೋಣೆ. ಮೂಲೆಯ ಮೇಜಿನ ಮೇಲಿದ್ದ ಗಣಕಯಂತ್ರ ಚಾಲೂ ಸ್ಥಿತಿಯಲ್ಲಿತ್ತು. ಅಷ್ಟರಲ್ಲಿ ಕತ್ತಿನ ಹಿಂಭಾಗದಲ್ಲಿ ಏನೋ ಕುಳಿತ ಅನುಭವ. ಬೆನ್ನಿಗೇ ಕರಮಚಂದನ ದನಿ,

'ಬಿದ್ದಪ್ಪ, ಅಲುಗಾಡಬೇಡ'

ಬೆನ್ನ ಹುರಿಯಲ್ಲಿ ಚಳಿ ಆಡಿದಂತಾಯಿತು. ಕರಮಚಂದ ಠಪ್ಪನೆ ನನ್ನ ಕತ್ತಿಗೆ ಯಾವುದೋ ವಸ್ತುವಿನಿಂದ ಬಡಿದ. 'ಆಹಾ! ಇಲ್ನೋಡು, ಇದು ನಿನ್ನ ಕುತ್ತಿಗೆಯೇರಿತ್ತು'. ಪ್ಲಾಸ್ಟಿಕ್ ಡಬ್ಬದಲ್ಲಿ ಒಂದು ನೊಣದಂತಹ ಕೀಟವಿತ್ತು. ಸಾಮಾನ್ಯ ನೊಣಕ್ಕಿಂತ ತುಸು ದೊಡ್ಡ ಗಾತ್ರ. ಕಂದು ಬಣ್ಣದ್ದು. ನಾವಿಬ್ಬರು ಅದನ್ನು ಪರಿಶೀಲಿಸುತ್ತಿರುವಾಗ ಹಿಂದಿನಿಂದ ಏರುದನಿ ತೂರಿ ಬಂತು– 'ಕೈ ಮೇಲೆತ್ತಿ. ಇಲ್ಲದಿದ್ದರೆ ಸುಟ್ಟು ಬಿಡುತ್ತೇನೆ.'

ಕರಮಚಂದ ಡಬ್ಬಿಯನ್ನು ಚಕ್ಕನೆ ಜೇಬಿಗಿಳಿಸಿ, ಕೈ ಮೇಲೆತ್ತಿದ. ನಾನೂ ಅನುಸರಿಸಿದೆ. ಬಂದೂಕನ್ನು ನಮ್ಮತ್ತ ಗುರಿ ಮಾಡಿ ನಿಂತಿದ್ದ ತೆಳ್ಳಗಿನ ಮನುಷ್ಯ! ಆತನದ್ದು ಇರಿಯುವ ನೋಟ. ವಲ್ಲಮ್ಮ ಹೇಳಿದಂತೆ ತುಸು ಭೀತಿ ಹುಟ್ಟಿಸುವ ಮೊಗ!

'ಅಪ್ಪಣೆಯಿಲ್ಲದೆ ಒಳಗೆ ಬಂದಿದ್ದೀರಿ. ಯಾರು ನೀವು?' ಆತನ ಪ್ರಶ್ನೆ.

'ಓಹ್! ನಾವು ಪೊಲೀಸ್ ಇಲಾಖೆಯ ಪರವಾಗಿ ಬಂದಿದ್ದೇವೆ. ಕೊಡಗಿನಾದ್ಯಂತ ಡ್ರಗ್ಸ್ ಹಾವಳಿ ಹೆಚ್ಚಾಗಿದೆ. ಗುಟ್ಟಿನಲ್ಲಿ ಗಾಂಜಾ ಬೆಳೆಯುವುದು ಜಾಸ್ತಿಯಾಗಿದೆ. ನಿಮ್ಮಲ್ಲಿದ್ದ ಕಾಡು ಕಂಡು, ತನಿಖೆಗಾಗಿ ಬಂದೆವು. ನಮಗೇನಾದರೂ ಆದಲ್ಲಿ ಪೊಲೀಸರು ಕೆಲ ಹೊತ್ತಿನಲ್ಲಿ ಇಲ್ಲಿರುತ್ತಾರೆ. ನಾನು ಕರಮಚಂದ, ವಕೀಲ ಹಾಗೂ ಖಾಸಗಿ ಪತ್ತೆದಾರ. ಇವ್ನು ನನ್ನ ಸಹಾಯಕ ಪ್ರಸಾದ್ ಬಿದ್ದಪ್ಪ. ನಾವು ಕೈ ಕೆಳಗಿಳಿಸಬಹುದೇ, ಮಿ....?'

'ಜೆರ್ಮಿ. ಒಳಗೆ ಬನ್ನಿ. ಮಾತಾಡೋಣ' ತಕ್ಷಣ ಆತ ಮೆತ್ತಗಾದ. ನಾವು ಮನೆಯೊಳಗೆ ಹೋದೆವು. ಮನೆಯೊಳಗೆ ವಿಚಿತ್ರ ಮೌನ.

'ಕುಡಿಯಲು ಏನು ತಗೊಳ್ತೀರಿ, ಬಿಯರ್, ವಿಸ್ಕಿ?'

ಬಿಯರ್ ಕುಡಿಯುತ್ತಾ ಜೆರ್ಮಿ ತನ್ನ ಬಗ್ಗೆ ಹೇಳಿಕೊಂಡ. ಅಸ್ಸಾಂನಲ್ಲಿ ಕಂಪೆನಿಯೊಂದರಲ್ಲಿ ಎಂಜಿನಿಯರ್ ಆಗಿದ್ದನಂತೆ. ನಿವೃತ್ತಿಯಾದ ಮೇಲೆ ತನ್ನ ಊರಾದ ಕೊಡಗಿಗೆ ಮರಳಿದನಂತೆ. ಮದುವೆಯಾಗಿಲ್ಲ. ಯಾರೊಂದಿಗೂ ಸಂಪರ್ಕ ಕಡಿಮೆಯಂತೆ. ಯೋಗ, ಧ್ಯಾನದಲ್ಲಿ ಕಾಲ ಕಳೆಯುತ್ತಾನಂತೆ. ಒಂದು ಕೋಣೆಯಲ್ಲಿ ಯಾವುದೋ ಯೋಗಿಯ ಬೃಹತ್ ಪಟವಿತ್ತು. ಜೆರ್ಮಿ ನಮಗೆ ಮನೆಯನ್ನೆಲ್ಲಾ ತೋರಿಸಿದ. ಬೀಗ ಹಾಕಿದ ಒಂದು ಕೋಣೆಯ ಸನಿಹ ಬಂದಾಗ ಮಂದ್ರ ಸ್ಥಾಯಿಯಲ್ಲಿ ಗುಂಯ್ ಸದ್ದು ಕೇಳಿಸಿತು! ನನ್ನ ಮೊಗದಲ್ಲಿ ಮೂಡಿದ ಪ್ರಶ್ನೆ ಕಂಡು, ಜೆರ್ಮಿಯೇ ಸಮಜಾಯಿಷಿ ನೀಡಿದ.




'ಇದು ನನ್ನ ಧ್ಯಾನದ ಕೋಣೆ. ಮಂದ ದನಿಯಲ್ಲಿ ಶ್ರುತಿ ಹಾಕಿರುತ್ತೇನೆ. ಅದು ಏಕಾಗ್ರತೆಗೆ ನೆರವಾಗುತ್ತದೆ.'

ಮನೆಯಲ್ಲಿ ಮತ್ತೇನೂ ಅನುಮಾನಾಸ್ಪದ ಅಥವಾ ಭೀತಿ ಹುಟ್ಟಿಸುವ ವಸ್ತುಗಳು ಗೋಚರಿಸಲಿಲ್ಲ.

'ನಿಮ್ಮ ಅನುಮಾನ ಪರಿಹಾರವಾಯ್ತಲ್ಲ. ನಮ್ಮಲ್ಲೇನೂ ಡ್ರಗ್ಸ್ ಇಲ್ಲ!' ಜೆರ್ಮಿ ಉಸುರಿದ.

'ತನಿಖೆ ಮಾಡುವುದು ನಮ್ಮ ಕರ್ತವ್ಯ. ಥ್ಯಾಂಕ್ಸ್ ಫಾರ್ ದ ಡ್ರಿಂಕ್'. ನಾವು ಗೇಟು ದಾಟಿ ತೆರಳುವವರೆಗೂ, ಜೆರ್ಮಿ ನಮ್ಮೊಂದಿಗಿದ್ದ.

ಮರುದಿನ ಬೆಳಿಗ್ಗೆ ಉಪಾಹಾರ ಸೇವಿಸುವಾಗ, ಕರಮಚಂದ ಹೇಳಿದ–

'ನೀನು ವಲ್ಲಮ್ಮನ ಸಹಾಯದಿಂದ ಅಲುಮೇಲುವಿನ ಮನೆಯವರನ್ನು ಸಂಪರ್ಕಿಸು. ಆಕೆಯ ಕಾಯಿಲೆಯ ಬಗ್ಗೆ ಅವರಿಂದ ಮತ್ತು ಆಕೆಯ ವೈದ್ಯರಿಂದ ಮಾಹಿತಿ ಪಡೆದುಕೊ. ಆಕೆ ಜೆರ್ಮಿಯ ಬಗ್ಗೆ ಏನಾದರೂ ತಿಳಿಸಿದ್ದಾಳೆಯೇ ಅಂತ ವಿಚಾರಿಸು.'

'ಆ ನೊಣದ ಬಗ್ಗೆ ಏನಾದರೂ ತಿಳಿಯಿತೇ? ಅದು ಸಿಗುವುದೆಂದು ಮೊದಲೇ ಗೊತ್ತಾಗಿದ್ದು ಹೇಗೆ?'

'ವಲ್ಲಮ್ಮ ಹೇಳಿದಳಲ್ಲ. ಗುಂಯ್ ಅಂತ ಶಬ್ದ ಕೇಳಿತೆಂದು. ಹಾಗಾಗಿ ಜೇನುನೊಣದ ತರಹದ್ದು ಏನಾದರೂ ಇದ್ದರೆ ಬೇಕಾಗುತ್ತದೆಂದು ಡಬ್ಬಿ ಒಯ್ದೆ ಅಷ್ಟೇ.'

'ಅಲ್ಲಿ ಭಯ ಹುಟ್ಟಿಸುವ ಸಂಗತಿ ಏನೂ ಇದ್ದಂತೆ ಅನಿಸಲಿಲ್ಲ. ಕೆಲವೊಮ್ಮೆ ಮೌನವೇ ಭಯಾನಕ!'

'ನೀನು ಹೇಳುವುದು ಸರಿ. ವಲ್ಲಮ್ಮನಿಗೆ ಜೆರ್ಮಿ ನಿಗೂಢವಾಗಿ ಕಾಣಿಸಿದ್ದಾನೆ. ಇರಲಿ, ನನಗೀಗ ಪೊಲೀಸ್ ಠಾಣೆಯಲ್ಲಿ ಸ್ವಲ್ಪ ಕೆಲಸವಿದೆ. ನೀನು ಅಲುಮೇಲುವಿನ ಮನೆಯತ್ತ ಹೊರಡು.'

ಕರಮಚಂದನ ಸೂಚನೆಯಂತೆಯೇ ನಾನು ವಲ್ಲಮ್ಮನ ನೆರವಿನಿಂದ ಅಲುಮೇಲುವಿನ ಮನೆಗೆ ಹೋದೆ. ಆಕೆಯ ತಾಯಿ, ತಂಗಿ ಇದ್ದರು.